ಮುಂಬೈ

ಬೆಳ್ಳಿ ಗಟ್ಟಿ	1ಕೆಜಿ	29,455ರು.
ಶುದ್ಧ ಚಿನ್ನ	10 ಗ್ರಾಂ	17,690ರು.
ಸ್ಟ್ಯಾ. ಚಿನ್ನ	10 ಗ್ರಾಂ	17,600ರು.

ಬೆಂಗಳೂರು

ಬೆಳ್ಳಿ ಗಟ್ಟಿ	1 ಕೆಜಿ	30,200ರು.
ಸ್ಟ್ಯಾ. ಚಿನ್ನ	10 ಗ್ರಾಂ	17,892ರು.
ಆಭರಣ ಚಿನ್ನ	1 ಗ್ರಾಂ	1664 ರು.

ಹಂದಿಜ್ವರ: ರಾಜ್ಯದಲ್ಲಿ ಮೃತರ ಸಂಖ್ಯೆ 123ಕ್ಕೆ

ಬೆಂಗಳೂರು: ಹಂದಿ ಜ್ವರಕ್ಕೆ ಮತ್ತೊಬ್ಬರು ಬಲಿಯಾಗಿದ್ದು, ಈ ರೋಗದಿಂದ ರಾಜ್ಯದಲ್ಲಿ ಮೃತಪಟ್ಟವರ ಸಂಖ್ಯೆ 123ಕ್ಕೆ ಏರಿದೆ.

ನಗರದ ಖಾಸಗಿ ಆಸ್ಪತ್ರೆಗೆ ನವೆಂಬರ್ 30 ರಂದು ದಾಖಲಾಗಿದ್ದ 35 ವರ್ಷದ ವ್ಯಕ್ತಿಯೊಬ್ಬರು ಡಿ.2 ರಂದು ಮೃತಪಟ್ಟಿದ್ದು, ಎಚ್1ಎನ್1 ಸೋಂಕು ಇದ್ದದ್ದು ದೃಢಪಟ್ಟಿದೆ.

ಇನ್ನೂ ಹನ್ನೊಂದು ಜನರಲ್ಲಿ ಎಚ್1ಎನ್1 ಸೋಂಕು ಇರುವುದು ಶನಿವಾರ ದೃಢಪಟ್ಟಿದ್ದು, ಒಟ್ಟಾರೆ ಸೋಂಕಿತರ ಸಂಖ್ಯೆ 1601ಕ್ಕೆ ಏರಿದೆ.

ಅಂತರ್ಜಾಲ ಶೋಧ: ಯಾಹೂ, ಮೈಕ್ರೋಸಾಫ್ಟ್ ಈಗ ಫ್ರೆಂಡ್ಸ್

ಸ್ಯಾನ್‌ಫ್ರಾನ್ಸಿಸ್ಕೋ: ಸಾಫ್ಟ್‌ವೇರ್ ದಿಗ್ಗಜ ಮೈಕ್ರೋಸಾಫ್ಟ್ ಮತ್ತು ಅಂತರ್ಜಾಲ ಶೋಧ ತಾಣ ಯಾಹೂ ಅಂತರ್ಜಾಲ ಶೋಧ ಮತ್ತು ಜಾಹೀರಾತು ಒಪ್ಪಂದಕ್ಕೆ ಸಹಿ ಹಾಕಿವೆ. ಈ ಒಪ್ಪಂದ ಮುಂದಿನ ವರ್ಷದಿಂದ ಅನುಷ್ಠಾನಕ್ಕೆ ಬರಲಿದೆ. ಅ.27ಕ್ಕೇ ಈ ಒಪ್ಪಂದ ಪೂರ್ಣಗೊಳ್ಳಬೇಕಿತ್ತಾದರೂ, ಮಾತುಕತೆ ಮುಂದುವರಿದು 10 ವರ್ಷಗಳ ಸಹಯೋಗ ಒಪ್ಪಂದ ಮಾಡಿಕೊಳ್ಳಲು ನಿರ್ಧರಿಸಲಾಯಿತು. ಅಂತರ್ಜಾಲ ಶೋಧ, ಜಾಹೀರಾತು ಪ್ರಪಂಚದ ಅನಭಿಷಿಕ್ತ ದೊರೆಯಾಗಿ ಮೆರೆಯುತ್ತಿರುವ ಗೂಗಲ್ ಅನ್ನು ಹಿಮ್ಮೆಟ್ಟಿಸಲು ಈ ಕಂಪನಿಗಳು ಸ್ನೇಹಹಸ್ತ ಚಾಚಿವೆ. ಆದರೆ, ಗೂಗಲ್‌ಗೆ ಎಷ್ಟರ ಮಟ್ಟಿನ ಪೈಪೋಟಿ ನೀಡುತ್ತವೆ ಎಂಬುದನ್ನು ಕಾದು ನೋಡಬೇಕು.

ದುಬೈ ಬಿಕ್ಕಟ್ಟಿಂದ ಭಾರತಕ್ಕೆ ಸಮಸ್ಯೆಯಿಲ್ಲ: ವಿಶ್ವಬ್ಯಾಂಕ್

ನವದೆಹಲಿ: ದುಬೈ ಸಾಲ ಬಿಕ್ಕಟ್ಟಿನಿಂದ ಭಾರತಕ್ಕೆ ಯಾವುದೇ ಸಮಸ್ಯೆ ಎದುರಾಗದು ಎಂದು ವಿಶ್ವ ಬ್ಯಾಂಕ್ ಸಮೂಹದ ಅಧ್ಯಕ್ಷ ರಾಬರ್ಟ್ ಝೋಲಿಕ್ ತಿಳಿಸಿದ್ದಾರೆ. ಅವರು ಆರ್‌ಬಿಐ ಗವರ್ನರ್ ಡಿ.ಸುಬ್ಬರಾವ್, ಯೋಜನಾ ಆಯೋಗದ ಉಪಾಧ್ಯಕ್ಷ ಮೋಂಟೆಕ್ ಸಿಂಗ್ ಅಹ್ಲುವಾಲಿಯಾ ಮತ್ತಿತರರ ಜತೆ ನಡೆದ ಸಭೆ ಬಳಿಕ ಮಾತನಾಡಿದರು. ದುಬೈ ಬಿಕ್ಕಟ್ಟು ಶೀಘ್ರ ಬಗೆಹರಿಯಲಿದ್ದು, ಭಾರತದ ಮಾರುಕಟ್ಟೆಗೆ ಯಾವ ಸಮಸ್ಯೆಯೂ ಉಂಟಾಗದು ಎಂದರು. ಭಾರತವು ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದ ಹೊರಬರುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದ ಅವರು, ವಿದೇಶಿ ನೇರ ಬಂಡವಾಳ ಹೂಡಿಕೆಯನ್ನೂ ಸ್ವಾಗತಿಸಿದರು.

3ಜಿ ಮೊಬೈಲ್‌ಗಳಲ್ಲೂ ಇನ್ನು ಸಿಗಲಿದೆ ವಿಶ್ವ ಹಿಂದು ಟಿವಿ

ಚೆನ್ನೈ: ಇನ್ನು ಮುಂದೆ 3ಜಿ ಮೊಬೈಲ್‌ಗಳಲ್ಲೂ ವಿಶ್ವ ಹಿಂದು ಟಿವಿ ವೀಕ್ಷಿಸಬಹುದು. ವಿಶ್ವಹಿಂದು ಟಿವಿಯನ್ನು 3ಜಿ ಮೊಬೈಲ್‌ನಲ್ಲಿ ವೀಕ್ಷಿಸುವ ಸೌಲಭ್ಯಕ್ಕೆ ಶನಿವಾರ ಕಂಚಿ ಶಂಕರಾಚಾರ್ಯ ಜಯೇಂದ್ರ ಸರಸ್ವತಿ, ವಿಎಚ್‌ಪಿಯ ಅಂತಾರಾಷ್ಟ್ರೀಯ ಅಧ್ಯಕ್ಷ ಅಶೋಕ್ ಸಿಂಘಾಲ್ ಹಾಗೂ ಜನತಾ ಪಕ್ಷದ ಅಧ್ಯಕ್ಷ ಸುಬ್ರಹ್ಮಣ್ಯನ್ ಸ್ವಾಮಿ ಜಂಟಿಯಾಗಿ ಚಾಲನೆ ನೀಡಿದ್ದಾರೆ. ಈ ಮೂಲಕ ಹಿಂದೂ ಸಮುದಾಯದ ಜನರಿಗೆ 'ವಿಶ್ವ ಹಿಂದು ಟಿವಿ' ಮೂಲಕ ಮಾಹಿತಿ ಒದಗಿಸುವ ವಿಎಚ್‌ಪಿ ಆಶಯ ಈಡೇರಿದಂತಾಗಿದೆ. ಆರ್‌ಎಸ್‌ಎಸ್, ವಿಎಚ್‌ಪಿ ಬಗ್ಗೆ ಜನರಿಗಿರುವ ತಪ್ಪು ತಿಳುವಳಿಕೆ ದೂರ ಮಾಡುವುದೇ ಇದರ ಉದ್ದೇಶ ಎಂದು ಸಿಂಘಾಲ್ ಹೇಳಿದ್ದಾರೆ.

8ಕ್ಕೆ ಪ್ರಸಕ್ತ ಸಾಲಿನ ಪ್ರೌಢಶಾಲಾ ಶಿಕ್ಷಕರ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: 2009–10ನೇ ಸಾಲಿನ ಪ್ರೌಢಶಾಲಾ ಸಹ ಶಿಕ್ಷಕರು (ಗ್ರೇಡ್–2) ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ (ಗ್ರೇಡ್–1 ಶಿಕ್ಷಕರ) ನೇಮಕಾತಿಯ ತಾತ್ಕಾಲಿಕ ಪಟ್ಟಿಯನ್ನು ಡಿ.8ರಂದು ಬೆಳಗ್ಗೆ 11ಗಂಟೆಗೆ ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರು ಹಾಗೂ ಜಿಲ್ಲಾ ಉಪನಿರ್ದೇಶಕರ (ಆಡಳಿತ) ಕಚೇರಿಯಲ್ಲಿ ಪ್ರಕಟಿಸಲಾಗುತ್ತದೆ. ಈ ಬಗ್ಗೆ ಆಕ್ಷೇಪಣೆಗಳಿದ್ದರೆ ಸಂಬಂಧಿಸಿದ ಉಪ ನಿರ್ದೇಶಕರ ಕಚೇರಿಯಲ್ಲಿ ನಿಗದಿತ ನಮೂನೆಯಲ್ಲಿ ಆಕ್ಷೇಪಣೆಗಳನ್ನು ಡಿ.17ರೊಳಗೆ ಸಲ್ಲಿಸಬೇಕು. ಆಯ್ಕೆಯಾದ ಅಭ್ಯರ್ಥಿಗಳು ಸಂಬಂಧಿಸಿದ ವಿಭಾಗೀಯ ಸಹ ನಿರ್ದೇಶಕರ ಕಚೇರಿಯಲ್ಲಿ ಡಿ.9ರಿಂದ 17ರವರೆಗೆ ತಮ್ಮ ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗಬೇಕು.

ಒನ್‌ಲೈನ್ ಸುದ್ದಿ: ಶೇ.3–5ರಷ್ಟು ಆದಾಯ ಷೇರುಪೇಟೆಯಲ್ಲಿ ಹೂಡುವ ಬಗ್ಗೆ ಭವಿಷ್ಯನಿಧಿ ಮಂಡಳಿ ಇನ್ನೂ ನಿರ್ಧಾರಕ್ಕೆ ಬಂದಿಲ್ಲ.

ರಾಜ್ಯ ಕೃಷಿ ಪ್ರಶಸ್ತಿಯ ಚೆಕ್ ಬೌನ್ಸ್!

■ ಈ ಚೆಕ್ ವಾಪಸ್ ಪಡೆದು ಬೇರೆ ಚೆಕ್ ನೀಡುತ್ತೇವೆ– ಕೃಷಿ ಇಲಾಖೆ ಭರವಸೆ ■

ಕನ್ನಡಪ್ರಭ ವಾರ್ತೆ, ಕೊಪ್ಪಳ, ಡಿ.5

ರಾಜ್ಯ ಮಟ್ಟದ ಕೃಷಿ ಪ್ರಶಸ್ತಿ ತೆಗೆದುಕೊಂಡ ರೈತರಿಗೆ ಸರ್ಕಾರವೇ ನೀಡಿದ ನಗದು ಬಹುಮಾನದ ಚೆಕ್ ಬೌನ್ಸ್ ಆಗಿವೆ...!

ಕಳೆದೆರಡು ವರ್ಷಗಳ ಹಿಂದೆಯೇ ಘೋಷಣೆಯಾಗಿದ್ದ ಪ್ರಶಸ್ತಿಗಾಗಿ ಹೋರಾಟ ಮಾಡಿದ ಬಳಿಕ ಕಳೆದ ತಿಂಗಳು (ನ.11ರಂದು) ಸರ್ಕಾರ ನೀಡಿದ್ದ ಬಹುಮಾನದ ಚೆಕ್ ಈಗ ಡೇಟ್ ಬಾರ್ ಆಗಿವೆ ಎಂಬ ಕಾರಣದಿಂದ ಬ್ಯಾಂಕ್‌ಗಳಲ್ಲಿ ನಗದಾಗದೆ ಬೌನ್ಸ್ ಆಗಿವೆ.

2007–08ನೇ ಸಾಲಿನಲ್ಲಿ ರಾಜ್ಯ ಮಟ್ಟದ ಅತ್ಯುತ್ತಮ ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿ ವಿಜೇತ ರೈತರಿಗೆ ಸರ್ಕಾರ ನಗದು ಬಹುಮಾನವಾಗಿ 30,000 ರು. ನಿಗದಿ ಮಾಡಿದೆ. ಅತ್ಯುತ್ತಮ ಬೆಳೆ ಬೆಳೆದು ರಾಜ್ಯದಲ್ಲಿಯೇ ಅತ್ಯಧಿಕ ಇಳುವರಿ ತೆಗೆಯುವ ರೈತರು ಈ ಪ್ರಶಸ್ತಿಗೆ ಭಾಜನರಾಗಿ ರುತ್ತಾರೆ. ಇದು ಬೆಳೆವಾರು ಇರುತ್ತದೆ.

ಮತ್ತೊಂದು ಚೆಕ್

ರೈತರ ಚೆಕ್‌ಗಳನ್ನು ಬ್ಯಾಂಕ್ ತಿರಸ್ಕರಿಸುತ್ತಿದ್ದಂತೆ ಎಚ್ಚೆತ್ತುಕೊಂಡ ಕೃಷಿ ಇಲಾಖೆ ಈಗ ಮತ್ತೊಂದು ಚೆಕ್ ನೀಡುವುದಾಗಿ ಹೇಳುತ್ತಿದೆ. ಈ ಕುರಿತು ಕೃಷಿ ಇಲಾಖೆ ಜಂಟಿ ನಿರ್ದೇಶಕ ಎಲ್.ಎನ್. ಬೆಳವಣಕಿ ಅವರು, ಇಲಾಖೆಯಿಂದ ಸೂಚನೆ ಬಂದಿದ್ದು, ರೈತರ ಚೆಕ್‌ಗಳನ್ನು ವಾಪಸ್ ಪಡೆದು ಬೆಂಗಳೂರಿಗೆ ಕಳುಹಿಸಿ ಕೊಡುತ್ತಿದ್ದೇವೆ. ಮತ್ತೊಂದು ಚೆಕ್ ಬಂದ ತಕ್ಷಣ ನೀಡುವುದಾಗಿ ಹೇಳುತ್ತಿದ್ದಾರೆ.

ಇಂತಹ ರಾಜ್ಯ ಮಟ್ಟದ ಪ್ರಶಸ್ತಿ ವಿಜೇತ ರೈತರಿಗೆ ಸರ್ಕಾರ ನಗದು ಬಹುಮಾನ ನೀಡದೆ ಕಳೆದೆರಡು ವರ್ಷಗಳಿಂದ ಸತಾಯಿಸಿತ್ತು. ಹೀಗಾಗಿ ಪ್ರಶಸ್ತಿ ವಿಜೇತ ರೈತ ಸಿದ್ದಪ್ಪ ಯಡ್ರಮ್ಮನಳ್ಳಿ ಅವರು ಪ್ರಶಸ್ತಿ ನೀಡದ ಸರ್ಕಾರದ ವಿರುದ್ಧ ಗ್ರಾಹಕ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ವಿಚಾರಣೆ ನಡೆಯುತ್ತಿದೆ.

ಬತ್ತ, ಮೆಕ್ಕೆಜೋಳ ಬೆಳೆಯಲ್ಲಿ ರಾಜ್ಯದಲ್ಲಿಯೇ ಅತ್ಯುತ್ತಮ ಬೆಳೆ ಬೆಳೆಯುವ ಮೂಲಕ 2007–08ನೇ ಸಾಲಿನ ಕೃಷಿ ಪ್ರಶಸ್ತಿಯನ್ನು ಕೊಪ್ಪಳ ಜಿಲ್ಲೆಯ ನಾಲ್ವರು ಪಡೆದುಕೊಂಡಿದ್ದರು. ಇದಕ್ಕೆ ಸರ್ಕಾರ ಪ್ರಥಮ ಬಹುಮಾನ 30 ಸಾವಿರ, ದ್ವಿತೀಯ ಬಹುಮಾನ 15 ಸಾವಿರ ರುಪಾಯಿ ಘೋಷಣೆ ಮಾಡಿತ್ತು.

■ **ಪ್ರತಿಭಟನೆ:** ಪ್ರಶಸ್ತಿ ಘೋಷಣೆ ಮಾಡಿ 2 ವರ್ಷವಾದರೂ ಪ್ರಶಸ್ತಿಯ ಮೊತ್ತ ಮತ್ತು ನಗದು ಬಹುಮಾನ ನೀಡದಿರುವ ಬಗ್ಗೆ ಅನೇಕ ಸಾರಿ ಪ್ರತಿಭಟನೆ ನಡೆಸಿದರೂ ಸರ್ಕಾರ ಮಾತ್ರ ರೈತರಿಗೆ ಬಹುಮಾನ ನೀಡಲೇ ಇಲ್ಲ. ಕೊನೆಗೆ ನ.11ರಂದು ಆಯಾ ಜಿ.ಪಂ.ನಲ್ಲಿಯೇ ಕೃಷಿ ಪ್ರಶಸ್ತಿ ನೀಡಿ, ನಗದು ಬಹುಮಾನದ ಚೆಕ್ ನೀಡಲಾಗಿತ್ತು.

ಕೊನೆಗೂ ಪ್ರಶಸ್ತಿ ಮತ್ತು ನಗದು ಬಹುಮಾನ ಬಂತಲ್ಲ ಎಂಬ ಖುಷಿಯಲ್ಲಿ ಪ್ರಗತಿಪರ ಕೃಷಿಕರು ಬ್ಯಾಂಕ್‌ಗೆ ಚೆಕ್ ನಗದೀಕರಣಕ್ಕಾಗಿ ಹಾಕಿದರೆ, ಚೆಕ್‌ಗಳ ಡೇಟ್ ಬಾರ್ ಆಗಿವೆ. ನಗದೀಕರಣ ಸಾಧ್ಯವಿಲ್ಲ ಎಂಬ ಉತ್ತರ ಸಿಕ್ಕಿದ್ದರಿಂದ ರೈತರು ಈಗ ಮಂಕಾಗಿದ್ದಾರೆ.


ಬೌನ್ಸ್ ಆದ ಚೆಕ್ ಪ್ರತಿ.

ಕೃಷಿ ಇಲಾಖೆ ಆಯುಕ್ತರ ಕಚೇರಿಯಿಂದ ಬಂದ ಚೆಕ್‌ಗಳು 2008ರ ಡಿ.23ರಂದು ಬರೆದಿದ್ದು, ಮತ್ತೊಮ್ಮೆ ದಿನಾಂಕವನ್ನು ಸೆ. 25, 2009 ಎಂದು ನಮೂದಿಸಿ ಅವರಸದಲ್ಲಿ ರೈತರಿಗೆ ನೀಡಿದ್ದಾರೆ. ಆದರೆ, ಈಗ ಚೆಕ್ ನಗದಾಗದೆ ಇರುವುದರಿಂದ ಮತ್ತೆ ರೈತರಿಗೆ ಹಣ ಸಿಗದಂತಾಗಿದೆ.

ವಿಶ್ವದ ಮೊದಲ ರೈತ ತೀರ್ಪು ಬಿಡುಗಡೆ

ಬೆಂಗಳೂರು: ಇದು ವಿಶ್ವದ ಮೊದಲ ರೈತ ತೀರ್ಪು. ಕೃಷಿ ರಂಗಕ್ಕೆ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಪ್ರತ್ಯೇಕ ಬಜೆಟ್ ಮಂಡಿಸಬೇಕು. ಹವಾಮಾನ ಆಧರಿತ ಬೆಳೆ ವಿಮೆ ಯೋಜನೆ ರದ್ದುಗೊಳಿಸಬೇಕು. ಶಾಲಾ ಪಠ್ಯದಲ್ಲಿ ಕೃಷಿ ವಿಷಯ ಅಳವಡಿಸಬೇಕು. ಹೈಬ್ರಿಡ್ ತಳಿ ಬದಲಿಗೆ ರೈತರೇ ಉತ್ಪಾದಿಸಬಹುದಾದ ಬರ ನಿರೋಧಕ ಶಕ್ತಿ ಇರುವ ಜವಾರಿ ತಳಿಗಳ ಸಂಶೋಧನೆ ಮಾಡಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಲಾಗಿದೆ.

ವಿಚಾರ ಸಂಕಿರಣಕ್ಕೆ ಆಗಮಿಸಿರುವ ರೈತರು.

ಕೃಷಿ ಸಂಶೋಧನೆಯನ್ನು ಹೆಚ್ಚು ಪ್ರಜಾತಾಂತ್ರಿಕಗೊಳಿಸುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಭಾಗವನ್ನು ಪ್ರತಿನಿಧಿಸುವ 30 ರೈತರು 3 ದಿನಗಳ ಕಾಲ ಬೆಂಗಳೂರಿನಲ್ಲಿ ನಡೆಸಿದ ವಿಚಾರ ವಿನಿಮಯ ಮತ್ತು ವಿಚಾರ ಸಂಕಿರಣ ನಂತರ ರೈತ ನ್ಯಾಯ ಮಂಡಳಿ ಈ ತೀರ್ಪು ನೀಡಿದೆ. 22 ಅಂಶಗಳ ರೈತ ತೀರ್ಪನ್ನು ಶನಿವಾರ ಘೋಷಿಸಲಾಯಿತು.

■ **ಮೊದಲ ರೈತ ತೀರ್ಪು:** ದಕ್ಷಿಣ ಏಷ್ಯಾದಲ್ಲಿ ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣ (ಆದರ್ಶ) ಸಂಸ್ಥೆಯು ಏರ್ಪಡಿಸಿದ್ದ ರೈತ ತೀರ್ಪು ಕಾರ್ಯಕ್ರಮ ಜಗತ್ತಿನಲ್ಲಿ ಮೊದಲ ಬಾರಿಗೆ ಕರ್ನಾಟಕದಲ್ಲಿ ನಡೆದು ಕೃಷಿ ಕ್ಷೇತ್ರದಲ್ಲಿ ಹೊಸ ಬೆಳವಣಿಗೆಗೆ ನಾಂದಿಯಾಗಿದೆ. ಇಂದಿನ ರೈತ ಸಾಂಪ್ರದಾಯಿಕ ವ್ಯವಸಾಯಕ್ಕೆ ಮರಳದೆ, ದುಬಾರಿ ಆಧುನಿಕ ಕೃಷಿಯನ್ನೂ ಮಾಡಲಾಗದೆ ಅತಂತ್ರ ಸ್ಥಿತಿ ಅನುಭವಿಸುತ್ತಿದ್ದಾನೆ. ಈ ಪರಿಸ್ಥಿತಿಯಲ್ಲಿ ರೈತ ಪರ ಸಂಶೋಧನೆಗಳು ನಡೆಯುವ ಅಗತ್ಯವಿದೆ ಹಾಗೂ ರೈತರ ಅನುಶೋಧನೆಗಳಿಗೂ ಮನ್ನಣೆ ಸಿಗಬೇಕಿದೆ ಎಂದು ರೈತರ ನ್ಯಾಯಮಂಡಳಿಯು ತನ್ನ ತೀರ್ಪಿನಲ್ಲಿ ತಿಳಿಸಿದೆ.

ರೈತ ತೀರ್ಪು ಮೇಲ್ವಿಚಾರಣಾ ಸಮಿತಿಯ ನೇತೃತ್ವ ವಹಿಸಿದ್ದ ನ್ಯಾ|ಎಂ.ಎನ್. ವೆಂಕಟಾಚಲಯ್ಯ ಮಾತನಾಡಿ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸರ್ಕಾರ ಅನೇಕ ಕೃಷಿ ಯೋಜನೆ ಮತ್ತು ಸಂಶೋಧನೆಗಳನ್ನು ನಡೆಸುತ್ತಿದೆ. ಆದರೆ ಇದರಲ್ಲಿ ರೈತರನ್ನೇ ಹೊರಗಿಟ್ಟರೆ ಯಶಸ್ಸು ಸಾಧಿಸುವುದು ಹೇಗೆ? ಎಂದು ಸರ್ಕಾರವನ್ನು ತರಾಟೆ ತೆಗೆದುಕೊಂಡರು.

ಡಾ|ಆರ್.ದ್ವಾರಕಿನಾಥ್, ಪಿ.ವಿ.ಸತೀಶ್, ಡಾ|ಮೈಕಲ್ ಪಿಂಬರ್ಟ್, ಐಸಿಆರ್‌ಎ ಪಿ.ಬಾಬು, ಪ್ರೊ|ಟಿ.ಎನ್.ಪ್ರಕಾಶ್, ಸುನಂದ ಜಯರಾಮ್, 'ಕನ್ನಡಪ್ರಭ' ವರ್ಷದ ವ್ಯಕ್ತಿ ಪ್ರಶಸ್ತಿ ವಿಜೇತ ಚೆನ್ನಬಸಪ್ಪ ಕೋಂಬಳಿ, ಕುರುಬೂರು ಶಾಂತಕುಮಾರ್, ಹೇಮಲತಾ ಮಹಿಷಿ, ಬಿ.ಟಿ.ಲಲಿತಾನಾಯಕ್ ಇದ್ದರು.

ಪ್ರಮುಖ ಶಿಫಾರಸುಗಳು

- ಕಬ್ಬು ಬೆಳೆ ಸಂಶೋಧನೆಗಾಗಿ ಕಬ್ಬು ಸಂಶೋಧನಾ ಕೇಂದ್ರ ಸ್ಥಾಪನೆ
- ಕೃಷಿರಂಗಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಪ್ರತ್ಯೇಕ ಬಜೆಟ್
- ಗ್ರಾಪಂ ಮಟ್ಟದಲ್ಲಿ ದೇಸಿ ಬೀಜಬ್ಯಾಂಕ್ ಸ್ಥಾಪನೆ
- ಸಣ್ಣ ರೈತರಿಗೆ ಅನುಕೂಲ ಕಲ್ಪಿಸಲು ಸಂಚಾರಿ ಮಣ್ಣು ಪರೀಕ್ಷಾ ಕೇಂದ್ರಗಳ ವ್ಯವಸ್ಥೆ
- ಶಾಲಾ ಪಠ್ಯದಲ್ಲಿ ಕೃಷಿ ವಿಷಯ
- ಕೃಷಿ ವಿವಿ ಹಾಗೂ ಸರ್ಕಾರಿ ಸಂಶೋಧನಾ ಸಂಸ್ಥೆಯಲ್ಲಿ ರೈತರ ಸಹಭಾಗಿತ್ವಕ್ಕೆ ಅವಕಾಶ
- ಹೋಬಳಿ ಮಟ್ಟದಲ್ಲಿ ಕೃಷಿ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆಗಾಗಿ ಗುಡಿ ಕೈಗಾರಿಕೆಗಳ ಸ್ಥಾಪನೆ ಮಾಡಬೇಕು.

➤ ಮೊದಲನೇ ಪುಟದಿಂದ:

ಶುಂಠಿ ಗುತ್ತಿಗೆದಾರನ ಸೋಗಲ್ಲಿದ್ದ ನಜೀರ್!

ಟೆಂಟ್‌ನಿಂದ ಹೊರಗಡೆ ನೋಡಬಹುದಾಗಿತ್ತಾದರೂ ಟೆಂಟ್‌ನೊಳಗೆ ಯಾರಿಗೂ ನೋಡಲು ಅಸಾಧ್ಯವಾದಂಥ ವ್ಯವಸ್ಥೆ ಕಲ್ಪಿಸಿಕೊಂಡಿದ್ದ. ನಜೀರ್‌ನ ಈ ಟೆಂಟ್ ಹಲವರಿಗೆ ಕುತೂಹಲ ಮೂಡಿಸಿದ್ದರೆ, ಅನೇಕರಿಗೆ ಸಂಶಯ ತಂದಿತ್ತು.

● ರಾತ್ರಿ ಹೊತ್ತಿನಲ್ಲಿ ನಜೀರ್ ಟೆಂಟ್‌ಗೆ ಅನೇಕ ಅಪರಿಚಿತರು ಬರುತ್ತಿದ್ದರು. ಬೆಳಗಿನ ಜಾವ 4 ಗಂಟೆ ವೇಳೆಗೆ ಅಲ್ಲಿಂದ ತೆರಳುತ್ತಿದ್ದರು. ಹಗಲಿನಲ್ಲಿ ನಜೀರ್ ಸಾಮಾನ್ಯ ಕಾರ್ಮಿಕನಂತೆ ಕೆಲಸ ಮಾಡುತ್ತಿದ್ದ. ತನ್ನ ಸ್ನೇಹಿತರೆಂದು ನಜೀರ್ ಹೇಳಿಕೊಳ್ಳುತ್ತಿದ್ದ ಕೇರಳ ಮೂಲಕ ಕೆಲವರು ಆಗಿಂದಾಗ್ಗೆ ತೋಟಕ್ಕೆ ದುಬಾರಿ ಬೆಲೆಯ ವಾಹನಗಳಲ್ಲಿ ಬರುತ್ತಿದ್ದರು. ನಜೀರ್ ಅವರಿಗೆ 'ಹೀರೋ' ಆಗಿ ಕಂಡುಬರುತ್ತಿದ್ದ.

● ನಜೀರ್‌ನನ್ನು ವಾಹನದಲ್ಲಿ ಕೆಲಗಂಟೆಗಳ ಕಾಲ ಹೊರಕ್ಕೆ ಕರೆದೊಯ್ಯುತ್ತಿದ್ದರು. 2 ವರ್ಷಗಳಲ್ಲಿ ಕೆಲವೊಮ್ಮೆ ಮಾತ್ರ ನಜೀರ್‌ನ ಪತ್ನಿ, ಮಕ್ಕಳು ಬಂದಿದ್ದರು. ಈ ರೀತಿ ಸ್ನೇಹಿತರು, ಬಂಧುಗಳು ಬಂದಾಗ ತಂಗಲುಬೇಕೆಂದು ಹೊಸತೋಟದಲ್ಲಿ ನಜೀರ್ ಮತ್ತೊಂದು ಮನೆಯನ್ನೂ ಬಾಡಿಗೆಗೆ ಪಡೆದಿದ್ದ.

■ **ಹೊಸತೋಟದಲ್ಲೇ ಇದ್ದ ನಜೀರ್:** ಕಳೆದ ವರ್ಷ ಅಕ್ಟೋಬರ್‌ವರೆಗೂ ಹೊಸತೋಟದಲ್ಲಿಯೇ ಇದ್ದ ನಜೀರ್, ಹೊಸತೋಟದಲ್ಲಿ ಭಗವಾದ್ವಜ ಹಾರಾಟದ ವಿಷಯದಲ್ಲಿ ಸಂಘಪರಿವಾರ ಮತ್ತು ಸ್ಥಳೀಯ ಸಂಘಟನೆಗಳಿಗೆ ವಿವಾದ ತಲೆದೋರಿ ವಿಕೋಪಕ್ಕೆ ತೆರಳಿದ ಸಂದರ್ಭ ಪೊಲೀಸರು ಹೆಚ್ಚಿನ ಸಂಖ್ಯೆಯಲ್ಲಿ ಹೊಸತೋಟಕ್ಕೆ ಬಂದು ಠಿಕಾಣಿ ಹೊಡಿದ್ದನ್ನು ಗಮನಿಸಿ, ಹೊಸತೋಟದಿಂದಲೇ ಕಾಲ್ಕಿತ್ತ. ಹೊಸತೋಟದ ಹಿಂದೂ ಸಂಘಟನೆಗಳ ಕಾರ್ಯಕರ್ತರು ಈ ಸಂದರ್ಭವೂ ನಸೀರ್ ಚಲನವಲನ ಮತ್ತು ಆತನ ದಿಢೀರ್ ಕಣ್ಮರೆ ಬಗ್ಗೆ ಜಿಲ್ಲಾ ಪೊಲೀಸ್ ಅಧಿಕಾರಿಗಳಿಗೆ ತಿಳಿಸಿದರಾದರೂ ಪೊಲೀಸ್ ಇಲಾಖೆ ಗಂಭೀರವಾಗಿ ಗಮನ ನೀಡಲಿಲ್ಲ. ಹೀಗಾಗಿ ನಾಸೀರ್ ಹೊಸತೋಟದಲ್ಲೇ ಆಶ್ರಯ ಪಡೆದಿದ್ದ ಎಂಬ ಅಂಶ ಬೆಳಕಿಗೆ ಬರಲು 1 ವರ್ಷವೇ ಬೇಕಾಯಿತು.

● ಬೆಂಗಳೂರು ಬಾಂಬ್ ಸ್ಫೋಟ ಪ್ರಕರಣ ನಡೆದ ನಂತರವೂ ನಜೀರ್ ಹೊಸತೋಟದಲ್ಲಿಯೇ ಇದ್ದಿರಬಹುದಾದ ಶಂಕೆಯಿದ್ದು, ಇಲ್ಲಿಂದಲೇ ಮತ್ತಷ್ಟು ವಿಧ್ವಂಸಕ ಕೃತ್ಯ ನಡೆಸಿರಬಹುದು ಎಂದು ಅನುಮಾನಿಸಲಾಗಿದೆ.

● ದುಬೈ ಮೂಲದ ಸರ್ಫೋಜ್ ಖಾನ್ ಎಂಬಾತ ಹೊಸತೋಟದಲ್ಲಿ ನೆಲೆಸಿದ್ದ ನಜೀರ್‌ಗೆ 2 ಲಕ್ಷ ರು.ಗಳಷ್ಟು ಹಣವನ್ನು ಆಗಿಂದಾಗ್ಗೆ ಹವಾಲ ಮೂಲಕ ಸರಬರಾಜು ಮಾಡುತ್ತಿದ್ದ ಎನ್ನಲಾಗಿದೆ. ಈ ಬಗ್ಗೆಯೂ ಸ್ಥಳೀಯ ಯುವಕರು ಪೊಲೀಸರಿಗೆ ಮಾಹಿತಿ ನೀಡಿದ್ದರೂ ಯಾವ ತನಿಖೆಯೂ ಪೊಲೀಸ್ ಇಲಾಖೆ ಮುಂದಾಗಿರಲಿಲ್ಲ.

● ನಜೀರ್ ಕಾರ್ಯಚಟುವಟಿಕೆ ಬಗ್ಗೆ ಮತ್ತು